ಇ) ಈ ವಿಮಾನ ನಿಲ್ದಾಣವನ್ನು ರಾಜ್ಯ ಸರ್ಕಾರವೇ ಅಭಿವೃದ್ಧಿಪಡಿಸಲು ವಾಯುಯಾನ ಮಂತ್ರಾಲಯವು ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ದಿನಾಂಕ. 7.8.97ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿರಾಜಪೇಟೆ ನಗರಕ್ಕೆ ಕುಡಿಯುವ ನೀರಿನ ಯೋಜನೆ

1851 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97ನೇ ಸಾಲಿನಲ್ಲಿ ಕುಡಿಯುವ ನೀರಿಗಾಗಿ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಂಡಿದೆ, ಅದಕ್ಕಾಗಿ ಈವರೆಗೆ ಆಗಿರುವ ವೆಚ್ಚವೆಷ್ಟು?*

ಆ) *ವಿರಾಜಪೇಟೆ ನಗರಕ್ಕೆ ಬೀತ್ರಿಯ ಬಳಿ ಇರುವ ಕಾವೇರಿ ನೀರನ್ನು ಒದಗಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ?*

ಇ) *ಹಾಗಿದ್ದಲ್ಲಿ ಸರ್ಕಾರವು ಈ ಯೋಜನೆಗೆ ಈ ಸಾಲಿನಲ್ಲಿ ಎಷ್ಟು ಹಣ ಮೀಸಲಿಟ್ಟಿದೆ ಮತ್ತು ಈ ಯೋಜನೆ ಪೂರ್ಣಗೊಳಿಸಲು ಸರ್ಕಾರವು ಏನು ಕ್ರಮಕೈಗೊಂಡಿದೆ.*

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಕುಡಿಯುವ ನೀರಿಗಾಗಿ ಕೊಳವೆ ನೀರು ಸರಬರಾಜು, ಅಭಾವ ಪರಿಹಾರ, ನಗರ ನೀರು ಸರಬರಾಜು ಯೋಜನೆಗಳಿಗಾಗಿ ಆದ ವೆಚ್ಚ 95-96ನೇ ಸಾಲಿನಲ್ಲಿ ರೂ. 4222.45 ಲಕ್ಷ ರೂ.ಗಳು ಹಾಗೂ 96-97ನೇ ಸಾಲಿನಲ್ಲಿ ಸುಮಾರು 5216.87 ಲಕ್ಷ ರೂ.ಗಳು ವೆಚ್ಚವಾಗಿದೆ.

ಆ) ವಿರಾಜಪೇಟೆ ನಗರಕ್ಕೆ ನೀರನ್ನು ಒದಗಿಸುವ ಯೋಜನೆಗೆ ಅಂದಾಜು ಪಟ್ಟಿಯನ್ನು 195.00ರೂ. ಲಕ್ಷಗಳಿಗೆ ತಯಾರಿಸಲಾಗಿದೆ. ಅಂದಾಜು ಪಟ್ಟಿಯನ್ನು ತಾಂತ್ರಿಕ ಪರಿಶೀಲನೆಯ ಹಂತದಲ್ಲಿದ್ದು ನಂತರ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಇ) ಈ ಯೋಜನೆಯು ಮಂಜೂರಾಗಿಲ್ಲವಿರುವುದರಿಂದ,1997-98ನೇ ಆಯವ್ಯಯದಲ್ಲಿ ಯಾವ ಹಣವನ್ನು ಮುಡುಪಾಗಿಟ್ಟಿಲ್ಲ, ಸರ್ಕಾರದಿಂದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಕ್ರಮಕೈಗೊಳ್ಳಲಾಗುವುದು.

ಕಬ್ಬು ಬೆಳೆಗಾರರಿಗೆ ಪರಿಹಾರ

1852 - ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97ನೇ ಸಾಲಿನಲ್ಲಿ ಕಬ್ಬು ಬೆಳೆಗಾರರಿಗೆ ಸರ್ಕಾರವು ಎಷ್ಟು ಹಣವನ್ನು ಪರಿಹಾರವಾಗಿ ನೀಡಿದೆ, (ಅದರ ವಿವರ ನೀಡುವುದು)*